ಮೂಲ ದಾವಾ ಸಂಖ್ಯೆ. 82/2015 ಡಿ ಡಬ್ಲ್ಯೂ 6

(ದಿನಾಂಕ 21-01-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎಂ ಎಸ್ ವಕೀಲರಿಂದಃ-

ನನ್ನ ಸಾಕ್ಷಿ ಪ್ರಮಾಣಪತ್ರಕ್ಕೆ 1ನೇ ಪ್ರತಿವಾದಿಯು ಮಾಹಿತಿ ನೀಡಿದ್ದಾರೆ. ನನ್ನ ಸಾಕ್ಷಿ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರ ನನಗೆ ಗೊತ್ತು. ದಾವಾಸ್ತಿಯು ಮೂಲತಃ ಸಣ್ಣ ದುರುಗಪ್ಪ ಇವರದು. ಸದರಿ ಆಸ್ತಿ ಸಣ್ಣ ದುರುಗಪ್ಪ ಇವರಿಗೆ ಯಾರಿಂದ ಬಂತು ಎನ್ನುವುದು ನನಗೆ ಗೊತ್ತಿಲ್ಲ ಅವರ ಅಪ್ಪನ ಕಾಲದಿಂದಲೂ ಮಾಡುತ್ತಿದ್ದರು ಎನ್ನುತ್ತಾರೆ. ದಾವಾಸ್ತಿಗೆ ಸಂಬಂಧಿಸಿದಂತೆ ಪಹಣಿ, ಇಸಿ ಮತ್ತು ದಾಖಲೆಗಳನ್ನು ನಾನು ನೋಡಿರುವುದಿಲ್ಲ. ದಾವಾಸ್ತಿಯನ್ನು ಯಾರು ಯಾರಿಗೆ ಮಾರಾಟ ಮಾಡಿರುತ್ತಾರೆಂದರೆ ಸಾಕ್ಷಿಯು ದಾವಾಸ್ತಿಯನ್ನು ಯಾರೂ ಮಾರಾಟ ಮಾಡಿಲ್ಲವೆನ್ನುತ್ತಾರೆ. ನನಗೆ ಈಗ ವಯಸ್ಸು 48 ವರ್ಷ. ನಾನು ಬೈಲಪ್ಪ, ಗಂಗಮ್ಮ ಮತ್ತು ಕೋರಪ್ಪ ಇವರನ್ನು ನೋಡಿದ್ದೇನೆ. 1955 ರಲ್ಲಿ ಆಗಿರುವ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ ಆ ದಾಖಲೆಗಳನ್ನು ನಾನು ನೋಡಿಲ್ಲ. 1955 ರಲ್ಲಿ ದಾವಾಸ್ತಿಯನ್ನು ಇಂತವರೇ ಮಾರಾಟ ಮಾಡಿರುತ್ತಾರೆನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. 1ನೇ ಪ್ರತಿವಾದಿ ನನಗೆ ಚಿಕ್ಕಪ್ಪನಾಗಬೇಕು. 1ನೇ ಪ್ರತಿವಾದಿ ನನಗೆ ಚಿಕ್ಕಪ್ಪನಾಗಿರುವುದರಿಂದ ಅವನಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಪ್ರಮಾಣಪತ್ರವನ್ನು ಹಾಜರುಪಡಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ